ಭಗವಂತನನ್ನು ಮರೆತು ದೇವತೆಗಳನ್ನೂ ಪಿತೃಗಳನ್ನೂ ಅರ್ಚಿಸುವವರು ಆಯಾ ಲೋಕಗಳಿಗೆ ಹೋಗಿಬಂದು ಮತ್ತೆ ಈ ಲೋಕದಲ್ಲಿ ಹುಟ್ಟುತ್ತಾರೆ ಎಂದು ಎಂಟನೆಯ ಅಧ್ಯಾಯದಲ್ಲಿ ಹೇಳಿದೆ.

**ವಾಸುದೇವೇ ಭಗವತಿ ಭಕ್ತಿಯೋಗಃ ಪ್ರಯೋಜಿತಃ ।**
**ಜನಯತ್ಯಾಶು ವೈರಾಗ್ಯಂ**
**ಜ್ಞಾನಂ ಯದ್ ಬ್ರಹ್ಮದರ್ಶನಮ್** ॥ (೩:೩೨:೨೩)

ಭಗವಂತನಾದ ವಾಸುದೇವನಲ್ಲಿ ಮನಸ್ಸನ್ನು ನಿಲ್ಲಿಸಿ ಭಕ್ತಿಯೋಗವನ್ನು ಆಚರಿಸಿದರೆ ಅದು ಬೇಗ ವೈರಾಗ್ಯವನ್ನು, ಬ್ರಹ್ಮದರ್ಶನಕಾರಣವಾದ ಜ್ಞಾನವನ್ನೂ ಸೃಜಿಸುತ್ತದೆ. ಆದ್ದರಿಂದ ಭಗವದ್ಭಕ್ತಿಯೇ ಅತ್ಯಂತ ಶ್ರೇಷ್ಠ ಎಂಬುದು ಕಪಿಲೋಪದೇಶದ ಸಾರ.

ಮುಂದಿನ ಅಧ್ಯಾಯದಲ್ಲಿ ಕಥೆ ಮುಂದುವರೆದಿದೆ. ಕಪಿಲನು ತಾಯಿಗೆ ಉಪದೇಶವನ್ನು ನೀಡಿ ಆಕೆಯ ಅನುಮತಿಯನ್ನು ಪಡೆದು ತಪಸ್ಸಿಗೆ ತೆರಳುತ್ತಾನೆ. ದೇವ ಹೂತಿಯು ಸರಸ್ವತೀ ನದೀ ತೀರದ ಆಶ್ರಮದಲ್ಲಿ ಭಕ್ತಿಯಿಂದ ತಪಸ್ಸನ್ನು ಆಚರಿಸುತ್ತಾಳೆ. ಸಂಪೂರ್ಣ ತನ್ಮಯತೆಯಿಂದ ಭಗವಂತ ವಾಸುದೇವನನ್ನೇ ಧ್ಯಾನಿಸುತ್ತಾ ದೇಹವನ್ನೇ ಮರೆಯುತ್ತಾಳೆ. ಅಲ್ಲೇ ಸಿದ್ಧಿಯನ್ನು ಪಡೆಯುತ್ತಾಳೆ. ಕಪಿಲನೂ ಸಮುದ್ರಮಧ್ಯದ ದ್ವೀಪದಲ್ಲಿ ಸಾಂಖ್ಯಶಾಸ್ತ್ರವನ್ನು ಜಿಜ್ಞಾಸುಗಳಿಗೆ ಉಪದೇಶ ಮಾಡಲಾರಂಭಿಸುತ್ತಾನೆ.

### ಕಪಿಲೋಪದೇಶಕ್ಕೆ ಅರ್ಹತೆ

ಕಪಿಲೋಪದೇಶ ಯಾರಿಗೆ? ಇದಕ್ಕೆ ಅರ್ಹರಾರು? ಎಂದು ಕೇಳಿದರೆ ಅದಕ್ಕೆ ಗ್ರಂಥವೇ ಉತ್ತರಿಸುತ್ತದೆ.

**ಶ್ರದ್ಧಧಾನಾಯ ಭಕ್ತಾಯ ವಿನೀತಾಯಾನಸೂಯವೇ ।**
**ಭೂತೇಷು ಕೃತಮೈತ್ರಾಯ ಶುಶ್ರೂಷಾಭಿರತಾಯ ಚ ॥**
**ಬಹಿರ್ಜಾತವಿರಾಗಾಯ ಶಾಂತಚಿತ್ತಾಯ ದೀಯತಾಮ್।**
**ನಿರ್ಮತ್ಸರಾಯ ಶುಚಯೇ ಯಸ್ಯಾಹಂ**
**ಪ್ರೇಯಸಾಂ ಪ್ರಿಯಃ** ॥ (೩ : ೩೨. ೪೧–೪೨)

ಶ್ರದ್ಧೆ, ಭಕ್ತಿ, ವಿನಯ, ಅನಸೂಯತೆ, ಎಲ್ಲ ಜೀವಿಗಳಲ್ಲಿ ಸ್ನೇಹ, ಶುಶ್ರೂಷೆ, ವೈರಾಗ್ಯ, ಮನಶ್ಶಾಂತಿ, ಮಾತ್ಸರ್ಯಶೂನ್ಯತೆ, ಶುಚಿತ್ವ ಎಂಬ ಗುಣಗಳಿರುವವರು ಈ ಕಪಿಲೋಪದೇಶವನ್ನು ಕೇಳಲು ಮತ್ತು ಅನುಷ್ಠಾನಕ್ಕೆ ತರಲು ಅರ್ಹರು. ಅನರ್ಹರು ಯಾರು ಎಂಬುದೂ ಸ್ಪಷ್ಟ. ಆದರೂ ಗ್ರಂಥವು ಹೇಳಿದೆ:

**ನೈತತ್ ಖಲಾಯೋಪದಿಶೇನ್ನಾವಿನೀತಾಯ ಕರ್ಹಿಚಿತ್।**
**ನ ಸ್ತಬ್ಧಾಯ ನ ಭಿನ್ನಾಯ ನೈವ ಧರ್ಮಧ್ವಜಾಯ ಚ ॥**
**ನ ಲೋಲುಪಾಯೋಪದಿಶೇನ್ನ ಗೃಹಾ ರೂಢಚೇತಸೇ ।**
**ನಾಭಕ್ತಾಯ ಚ ಮೇ ಜಾತು ನ ಮದ್ಭಕ್ತದ್ವಿಷಾಮಪಿ ॥**
(೩ : ೩೨. ೩೯–೪೦)

ದುಷ್ಟರಿಗೆ, ವಿನಯವಿಲ್ಲದವರಿಗೆ, ಗರ್ವಿಗಳಿಗೆ, ಬರ್ಬರ ಬುದ್ಧಿಯವರಿಗೆ, ಧರ್ಮದ ಹೆಸರಿನಲ್ಲಿ ಮೋಸ ಮಾಡುವವರಿಗೆ, ವಿಷಯಾಸಕ್ತರಿಗೆ, ಕುಟುಂಬದಲ್ಲೇ ಮನಸ್ಸನ್ನಿಟ್ಟವರಿಗೆ, ದೈವಭಕ್ತರಲ್ಲದವರಿಗೆ ಮತ್ತು ದೈವಭಕ್ತರನ್ನು ದ್ವೇಷಿಸುವವರಿಗೆ ಈ ಉಪದೇಶವನ್ನು ನೀಡಬಾರದು.

ಹೀಗೆ ಜಗತ್ತಿನ ಹಿತಕ್ಕಾಗಿ ಕಪಿಲಮುನಿಯು ಭಕ್ತಿಭರಿತವಾದ ಸಾಂಖ್ಯಸಿದ್ಧಾಂತವನ್ನು ಬೋಧಿಸಿದ್ದಾನೆ. ಭಾಗವತವೆಂಬ ಚಿನ್ನದ ಒಡವೆಯಲ್ಲಿ ಹುದುಗಿರುವ ಅನರ್ಘ್ಯ ರತ್ನವೇ ಈ ಕಪಿಲೋಪದೇಶ. •

## ಕನ್ನಡ ಸಾಹಿತ್ಯದಲ್ಲಿ ಶ್ರೀರಾಮಕೃಷ್ಣರು

# ಶ್ರೀರಾಮಕೃಷ್ಣ

(*ರಚನೆ:* ಮಾಸ್ತಿ ವೆಂಕಟೇಶ ಐಯಂಗಾರ್; *ಪ್ರಕಾಶಕರು:* ಶ್ರೀರಾಮಕೃಷ್ಣಾಶ್ರಮ, ಬಸವನಗುಡಿ, ಬೆಂಗಳೂರು ; *ಪ್ರಕಟನೆ* : ೧೯೩೬)

ಗುರುವಿನ ಉಪದೇಶದ ಒಂದೊಂದು ಮಾತಿನಲ್ಲೂ ಅವರ ತೀವ್ರವಾದ ಚೇತನಕ್ಕೆ ಪಂಡಿತರು, ಪಾಮರರು, ಸಾಧಕರು, ಪರಮಹಂಸರು, ಉಪದೇಶಿಗಳು, ವ್ಯವಹಾರಿಗಳು ಇತ್ಯಾದಿ ಬಹುರೀತಿಯ ಜನರ ಸಹವಾಸದಿಂದ ಒಂದು ಪ್ರಪಂಚಜ್ಞಾನ ರೂಪುಗೊಳ್ಳುತ್ತಿತ್ತು. ವಿಷಯದಲ್ಲಿ ಒಂದು ವೈಶಾಲ್ಯವೂ, ಅನುಭವದಿಂದ ಬಂದ ಒಂದು ವೈಶಿಷ್ಟ್ಯವೂ ಕಾಣುತ್ತಿದ್ದಂತೆ ಈ ಉಪದೇಶದ ರೀತಿಯಲ್ಲಿ ಒಂದು ಅಪೂರ್ವ ಚಾತುರ್ಯವೂ ಪ್ರಕಟವಾಗುತ್ತಿತ್ತು. ಪರಮಹಂಸರ ಬಾಯಲ್ಲಿ ಉಪದೇಶದ ಮಾರ್ಗ ಒಂದು ಕಲೆಯಾಯಿತೆಂದು ಹೇಳಬಹುದು. ರಾಮಕೃಷ್ಣರಿಗೆ ಬಾಲ್ಯದಿಂದಲೂ ಗಣಿತಕ್ಕಿಂತ ಸಾಹಿತ್ಯದಲ್ಲಿ ರುಚಿ ಹೆಚ್ಚಂತೆ. ಮುಖ್ಯವಾಗಿ ಅವರ ಚೇತನ ನಿಯಮಕ್ಕಿಂತ ರಸದಲ್ಲಿ ಹೆಚ್ಚು ಸುಖವನ್ನು ಕಾಣುತ್ತಿತ್ತು. ಹುಟ್ಟಿನಿಂದ ಅವರು ಕವಿ. ಅದರಿಂದಲೇ ನಿರ್ಗುಣ ಬ್ರಹ್ಮವನ್ನು ಸಾಧಿಸಿದ ಮೇಲೆಯೂ ಅವರು ತಾಯಿಯನ್ನು ಪೂಜಿಸುತ್ತಿರುವರು. ಕವಿಯಾದದ್ದರಿಂದ ಇವರು ಉಪದೇಶದ ವಿಷಯವನ್ನು ಪ್ರತಿಪಾದಿಸುವುದರಲ್ಲಿ ಸೊಗಸನ್ನು ತರುತ್ತಿದ್ದರು. ಕಷ್ಟವಾದ ವಿಷಯವನ್ನು ಸುಲಭವಾಗಿ ವಿವರಿಸುವುದು, ಅದು ಮನಸ್ಸನ್ನು ಹೊಗುವಂತೆ ಒಂದು ಕತೆಯನ್ನು ಹೇಳುವುದು, ಅನೇಕ ಸಂದರ್ಭದಲ್ಲಿ ಅದರಲ್ಲಿ ಹಾಸ್ಯವನ್ನು ಬೆರೆಸುವುದು – ಇವರ ಉಪದೇಶದಲ್ಲಿ ಉದ್ದಕ್ಕೂ ಕಾಣುತ್ತಿರುತ್ತದೆ. ಸಾಮಾನ್ಯ ಜನರ ಅನುದಿನದ ಬಾಳುವೆಯಿಂದ ತಂದ ಅನೇಕ ಉಪಮಾನಗಳು ಈ ಉಪದೇಶಕ್ಕೆ ವಿಲಕ್ಷಣವಾದ ಕಳೆಯನ್ನು ಕೊಡುತ್ತವೆ. ಅನೇಕ ವೇಳೆ ಒಂದೇ ಭಾವವನ್ನೊಳಗೊಂಡ ಬೇರೆ ಬೇರೆ ಕತೆಯಿಂದ ಗುರು ಆ ಭಾವದ ಬೇರೆ ಬೇರೆ ಮುಖವನ್ನು ವ್ಯಕ್ತಪಡಿಸುವರು. (ಪುಟ ೭೯–೮೦)

ಭಾಗವತ ಪರಿಚಯ

**ಅವತಾರದ ಕಡೆಯ ಘಟ್ಟದಲ್ಲಿ ಶ್ರೀಕೃಷ್ಣನು ತನ್ನ ಪ್ರಿಯ ಶಿಷ್ಯನಾದ ಉದ್ಧವನಿಗೆ ಮಾಡುವ ಉಪದೇಶವು ಅತ್ಯಂತ ಗಹನವಾದ ತಾತ್ತ್ವಿಕ ವಿಚಾರಗಳನ್ನು ಮತ್ತು ಸಾಧನಪ್ರಕ್ರಿಯೆಯನ್ನು ಒಳಗೊಂಡಿದೆ. ಇದನ್ನು ಸರಳವಾಗಿ, ಕ್ರಮಬದ್ಧವಾಗಿ ನಮಗೆ ಪರಿಚಯಿಸಿರುವ ಲೇಖಕರು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು; ಮೈಸೂರಿನ ಚೈತ್ರ ಪಿ.ಯು. ಕಾಲೇಜಿನಲ್ಲಿ ಉಪನ್ಯಾಸಕರು.**



# ಶ್ರೀಕೃಷ್ಣನ ಕಡೆಯ ಉಪದೇಶ : ಉದ್ಧವ ಗೀತೆ

**ಡಾ. ರಮಾ ವಿ. ಬೆಣ್ಣೂರ್**

ಭಾರತೀಯ ಸಂಸ್ಕೃತಿಯ ಪ್ರಮುಖ ಲಕ್ಷಣವಾದ ಭಗವದ್‌ಭಕ್ತಿಯ ಮುಖ್ಯ ಸೆಲೆಯೇ 'ಶ್ರೀಮದ್‌ಭಾಗವತ' ಎನ್ನುತ್ತಾರೆ ತಿಳಿದವರು. ಭಕ್ತಿಯ ಬಗ್ಗೆ ಅತ್ಯಂತ ಖಚಿತವಾಗಿ, ನಿಖರವಾಗಿ ತಿಳಿಸುವ ಪವಿತ್ರ ಗ್ರಂಥ ಇದು ಎಂಬುದು ಸಾಮಾನ್ಯವಾಗಿ ಎಲ್ಲ ಜಿಜ್ಞಾಸುಗಳ ಅಭಿಪ್ರಾಯ. ಭಗವಾನ್ ವ್ಯಾಸ ಮಹರ್ಷಿಗಳಿಂದ ರಚಿತವಾಗಿ, ಅವರ ಮಗನಾದ ಶ್ರೀಶುಕಮುನಿಗಳಿಗೆ ಅದು ಹೇಳಲ್ಪಟ್ಟಿತೆಂಬುದು ಪರಂಪರಾಗತವಾಗಿ ಬಂದ ಸಂಗತಿ. ಶ್ರೀಕೃಷ್ಣ ಪರಮಾತ್ಮನೇ ಇದರ ಕೇಂದ್ರಬಿಂದು. ಇದರಲ್ಲಿಯ ಹನ್ನೊಂದನೆಯ ಸ್ಕಂಧವು ಸತ್ಯಶೋಧಕರಿಗೆ, ಮುಮುಕ್ಷುಗಳಿಗೆ ಮತ್ತು ಶ್ರೀಕೃಷ್ಣಭಕ್ತರಿಗೆ ಅತ್ಯಂತ ಮಹತ್ವದ ವಿಚಾರಗಳನ್ನೊಳಗೊಂಡಿದೆ. ಈ ಕಾರಣಕ್ಕಾಗಿಯೇ ಇದು ಬಹಳ ಪ್ರಾಮುಖ್ಯ ಪಡೆದಿದೆ.

ಈ ಸ್ಕಂಧದ ಕೇಂದ್ರಬಿಂದುವೂ ಶ್ರೀಕೃಷ್ಣನೇ. ತನ್ನ ಪ್ರಿಯಭಕ್ತನೂ ಅತ್ಯಂತ ಆತ್ಮೀಯನೂ ಬಂಧುವೂ ಆದ ಉದ್ಧವನಿಗೆ ಅವನ ಕೋರಿಕೆಯಂತೆ, ಈ ಭೂಮಿಯಿಂದ ತಾನು ನಿರ್ಗಮಿಸುವ ಮೊದಲು ಶ್ರೀಕೃಷ್ಣನು ನೀಡುವ ಅಂತಿಮ ಸಂದೇಶವೇ ಈ ಅಧ್ಯಾಯದ ಸಾರ ಎನ್ನಬಹುದು. ಇದನ್ನು 'ಉದ್ಧವ ಗೀತೆ' ಎಂದೂ ಕರೆಯುತ್ತಾರೆ. ಭಕ್ತಿಯ ಪ್ರಾಮುಖ್ಯತೆ, ಲೋಕದ ಎಲ್ಲ ವಸ್ತುಗಳಲ್ಲೂ ಪರಮಾತ್ಮನ ಇರುವಿಕೆಯನ್ನು ಗುರುತಿಸುವುದು, ಜಗತ್ತಿನಲ್ಲಿ ಇದ್ದೂ ಇಲ್ಲದಂತಿರುವುದು ಮುಂತಾದ ವಿಷಯಗಳನ್ನು ಕುರಿತು ಕತೆಗಳ ಮೂಲಕ, ವಿವರಣೆಗಳ ಮೂಲಕ ಬಹಳ ಪರಿಣಾಮಕಾರಿಯಾಗಿ ಉದ್ಧವ ಗೀತೆಯು ಬೋಧಿಸುತ್ತದೆ. ಇದರ ಕಥಾಹಂದರದ ಕಡೆಗೆ ಸ್ವಲ್ಪ ಗಮನ ಹರಿಸೋಣ.

## ಕಥಾಹಂದರ

ಬ್ರಹ್ಮನು ಎಲ್ಲ ದೇವತೆಗಳೊಡಗೂಡಿ ದ್ವಾರಕೆಗೆ ಬಂದು, ಶ್ರೀಕೃಷ್ಣನು ಭೂಮಿಗೆ ಬಂದ ಉದ್ದೇಶವು ಮುಕ್ತಾಯ ಗೊಂಡಿರುವುದರಿಂದ ಆತನು ತನ್ನ ಪರಮಪದಕ್ಕೆ ಹಿಂದಿರುಗಬೇಕಾಗಿ ವಿನಯದಿಂದ ಪ್ರಾರ್ಥಿಸುತ್ತಾನೆ. ಭಕ್ತಜನರಿಗೆ ಬಲು ಮುದ ನೀಡುವಂತಿರುವ ದೇವತೆಗಳ ಪ್ರಾರ್ಥನೆಗೆ ಉತ್ತರವಾಗಿ ಶ್ರೀಕೃಷ್ಣನು, "ನಾನು ಭೂಮಿಗೆ ಬಂದ ಉದ್ದೇಶವು ನೆರವೇರಿದ್ದರೂ ಒಂದು ಕಾರ್ಯ ಮಾತ್ರ ಬಾಕಿ ಉಳಿದಿದೆ. ಅದೆಂದರೆ ಉನ್ಮತ್ತರಾದ ಯಾದವರ ವಿನಾಶ. ಅದನ್ನು ಮಾಡದೆ ಹಾಗೆಯೇ ನಾನು ಹಿಂದಿರುಗಿದರೆ, ಅವರು ಎಲ್ಲ ಲೋಕಮರ್ಯಾದೆಗಳನ್ನು ಮೀರಿ ಸಮಸ್ತಲೋಕವನ್ನೂ

ವಿನಾಶಗೊಳಿಸುತ್ತಾರೆ. ಬ್ರಾಹ್ಮಣ ಶಾಪದಿಂದ ಈಗಾಗಲೇ ಆರಂಭಗೊಂಡಿರುವ ಅವರ ವಿನಾಶ ಕಾರ್ಯವನ್ನು ಪೂರ್ಣಗೊಳಿಸಿ ಬರುತ್ತೇನೆ" ಎಂದು ಹೇಳುತ್ತಾನೆ. ಇದರಿಂದ ಸಂತುಷ್ಟರಾದ ದೇವತೆಗಳು ಹಿಂದಿರುಗಿ ಹೋಗುತ್ತಲೇ ದ್ವಾರಕೆಯಲ್ಲಿ ದೊಡ್ಡ ದೊಡ್ಡ ಉತ್ಪಾತಗಳೂ ಅಪಶಕುನಗಳೂ ಕಾಣಿಸಿಕೊಳ್ಳಲಾರಂಭಿಸುತ್ತವೆ. ಇದರಿಂದ ಭಯಗೊಂಡ ಯದುವೃದ್ಧರು ಬಂದು ಶ್ರೀಕೃಷ್ಣನಲ್ಲಿ ತಮ್ಮ ಆತಂಕವನ್ನು ಹೇಳಿಕೊಂಡಾಗ, ಅವನು ಅವರಿಗೆ ಸಮಾಧಾನದ ಮಾತುಗಳನ್ನು ಹೇಳಿ, "ಇನ್ನು ಕೆಲವೇ ದಿನಗಳಲ್ಲಿ ದ್ವಾರಕೆಯು ಸಮುದ್ರದಲ್ಲಿ ಮುಳುಗುತ್ತದೆಯಾದ್ದರಿಂದ ನಾವೆಲ್ಲರೂ ಪವಿತ್ರವಾದ ಪ್ರಭಾಸ ಕ್ಷೇತ್ರಕ್ಕೆ ಹೊರಟುಹೋಗೋಣ" ಎಂದು ಹೇಳುತ್ತಾನೆ. ಒಮ್ಮತದಿಂದ ಒಪ್ಪಿ ಅವರೆಲ್ಲರೂ ಹೋದ ಮೇಲೆ, ಶ್ರೀಕೃಷ್ಣನನ್ನು ಸದಾ ಆಶ್ರಯಿಸಿಕೊಂಡೇ ಇರುತ್ತಿದ್ದ ಅವನ ಬಂಧುವೂ ಭಕ್ತನೂ ಆದ ಉದ್ಧವನು ಬಂದು ಶ್ರೀಕೃಷ್ಣನನ್ನು ಅಗಲಿ ತಾನು ಇರಲಾರೆನೆಂದು ಹೇಳಿ, ಶ್ರೀಕೃಷ್ಣನ ಧಾಮಕ್ಕೆ ತನ್ನನ್ನೂ ಕರೆದೊಯ್ಯಲು ಪ್ರಾರ್ಥಿಸುತ್ತಾನೆ. "ನಿನ್ನ ಉಪದೇಶಗಳನ್ನು ಸ್ಮರಿಸುತ್ತಾ, ನಿನ್ನ ಲೀಲೆಗಳನ್ನು ಕೀರ್ತನೆ ಮಾಡುತ್ತಾ ಮಾಯಾಮಯವಾದ ಈ ಸಂಸಾರವನ್ನು ದಾಟಬಲ್ಲ ನನಗೆ ಮಾಯೆಯ ಭಯವಿಲ್ಲ, ಆದರೆ ನಿನ್ನ ವಿರಹಕ್ಕೆ ಮಾತ್ರವೇ ಭಯಪಡುತ್ತೇನೆ" ಎನ್ನುತ್ತಾನೆ. ಅವನನ್ನು ಸಂತೈಸುತ್ತಾ ಶ್ರೀಕೃಷ್ಣನು, "ನಾನು ಈ ಜಗತ್ತನ್ನು ಪರಿತ್ಯಜಿಸಿ ಹೊರಟುಹೋದ ನಂತರ ನೀನೂ ಇಲ್ಲಿರಬಾರದು. ನನ್ನ ನಿರ್ಗಮನದೊಡನೆಯೇ ಕಲಿಯಿಂದ ಆಕ್ರಮಿಸಲ್ಪಡುವ ಈ ಲೋಕದ ಜನ ಅಧರ್ಮದಲ್ಲಿಯೇ ಮನಸ್ಸುಳ್ಳವರಾಗುತ್ತಾರೆ. ನೀನು ಮನೆ, ಮಠ, ಐಶ್ವರ್ಯ, ಬಂಧು, ಬಳಗ ಎಲ್ಲವನ್ನೂ ತೊರೆದು ನಿನ್ನ ಮನಸ್ಸನ್ನು ಸಂಪೂರ್ಣವಾಗಿ ನನ್ನಲ್ಲಿಯೇ ಇರಿಸಿ, ಎಲ್ಲ ಚರಾಚರ ಪ್ರಾಣಿಗಳನ್ನೂ ಸಮದೃಷ್ಟಿಯಿಂದ ನೋಡುತ್ತಾ, ಭೂಮಿಯಲ್ಲಿ ಸಂಚರಿಸುತ್ತಿರು. ನಿನ್ನ ಮನಸ್ಸು ಮತ್ತು ಇಂದ್ರಿಯಗಳಿಂದ ಆತ್ಮಾವಲೋಕನವನ್ನು ಮಾಡು. ವಿಸ್ತೃತವಾದ ಈ ಜಗತ್ತನ್ನು ಆತ್ಮನಲ್ಲಿಯೂ, ಆತ್ಮವನ್ನು ಅಧೀಶ್ವರನಾದ ನನ್ನಲ್ಲಿಯೂ ನೋಡು" ಎಂದು ಆದೇಶಿಸುತ್ತಾನೆ.

### ಅವಧೂತ ಉಪಾಖ್ಯಾನ

ಉದ್ಧವನಿಗೆ ಆತ್ಮತತ್ತ್ವವನ್ನು ಸಮಗ್ರವಾಗಿ ತಿಳಿಯಬೇಕೆಂಬ ಅಭಿಲಾಷೆ ಹುಟ್ಟುತ್ತದೆ. ಅನೇಕ ಪ್ರಶ್ನೆಗಳ ಮೂಲಕ ಶ್ರೀಕೃಷ್ಣನಿಂದ ಅವನು ಉಪದೇಶ ಪಡೆಯುತ್ತಾನೆ. "ನಾನು–ನನ್ನದು ಎಂಬ ಅಹಂಕಾರ, ಮಮಕಾರಗಳನ್ನು ಹೊಂದಿ ಸಂಸಾರಸಾಗರದಲ್ಲಿ ಮುಳುಗಿರುವ ನಾನು ಬ್ರಹ್ಮತ್ವವನ್ನು ಹೇಗೆ ಸಾಧಿಸಲಿ? ವಿಷಯಸುಖಗಳಲ್ಲಿಯೇ ಸದಾ ಆಸಕ್ತರಾಗಿರುವವರು ಕಾಮೋಪಭೋಗಗಳನ್ನು ಪರಿತ್ಯಜಿಸುವುದು ಅತಿ ಕಠಿಣ. ಮಾಯೆಯ ಮೋಹಕ್ಕೆ ವಶರಾಗಿ, ಇಂದ್ರಿಯಗಳಿಂದ ಅನುಭವಿಸಲ್ಪಡುವ ಬಾಹ್ಯವಸ್ತುಗಳನ್ನೇ ಸತ್ಯವೆಂದು ಭಾವಿಸುವವರು ಏನು ಮಾಡಬೇಕು?" ಎಂದು ಉದ್ಧವನು ಸಂದೇಹಪಡುತ್ತಾನೆ. ಅದಕ್ಕೆ ಶ್ರೀಕೃಷ್ಣನು, ಯಾವ ರೀತಿ ಮನುಷ್ಯನಿಗೆ ಅವನ ಆತ್ಮನೇ ಗುರು ಆಗಿರುತ್ತಾನೆ, ಮನುಷ್ಯನು ತನ್ನ ಪ್ರತ್ಯಕ್ಷಾನುಭವ ಮತ್ತು ಅನುಮಾನದ ಮೂಲಕ, ತನ್ನ ಹಿತಾಹಿತಗಳನ್ನು ನಿರ್ಣಯಿಸಿ ಯಾವ ರೀತಿ ಶ್ರೇಯಸ್ಸನ್ನು ಪಡೆದುಕೊಳ್ಳಬಹುದು ಎಂಬುದನ್ನು ಅವಧೂತ ಮತ್ತು ಯದುರಾಯನ ನಡುವೆ ನಡೆದ ಸಂವಾದದ ಕಥೆಯ ಮೂಲಕ ತಿಳಿಯಪಡಿಸುತ್ತಾನೆ.

ಆ ಅವಧೂತನು ಪರಮ ವಿದ್ವಾಂಸನಾದರೂ ಬಾಲಕನಂತೆ ಸದಾ ಆನಂದದಿಂದ ನಿರ್ಭಯನಾಗಿ ಅಲೆಯುತ್ತಿರುತ್ತಾನೆ. ಅದರ ಮರ್ಮವೇನೆಂದು ಯದುವು ಕೇಳಿದಾಗ ಅವನು ತನ್ನ ಬುದ್ಧಿಯ ಮೂಲಕ ಹಲವಾರು ಗುರುಗಳನ್ನು ಆಶ್ರಯಿಸಿರುವುದಾಗಿ ಹೇಳಿ, ಅವರು ಯಾರೆಂಬುದರ ಪರಿಚಯ ಮಾಡಿಸುತ್ತಾನೆ. ಭೂಮಿಯಿಂದ 'ಸತ್ಯನಿಯಮದಿಂದ ವಿಚಲಿತನಾಗಬಾರದೆಂಬ' ಪಾಠವನ್ನೂ, 'ಬೇರೆಯವರಿಗೆ ಉಪಕಾರ ಮಾಡುವುದೇ ಜೀವನದ ಮುಖ್ಯ ಪ್ರಯೋಜನ' ಎಂಬ ಪಾಠವನ್ನು ಪರ್ವತಗಳಿಂದಲೂ, ಸಾಧಕನು ಮಿತ ಆಹಾರವನ್ನು ಸೇವಿಸಬೇಕೆಂಬುದನ್ನು ಮತ್ತು ಯಾವುದಕ್ಕೂ ಅಂಟಿಕೊಳ್ಳದೆ ಗುಣದೋಷಗಳಿಂದ ಮುಕ್ತನಾಗಿರಬೇಕೆಂಬುದನ್ನು ಪ್ರಾಣವಾಯುವಿನಿಂದಲೂ, ಅಖಂಡತೆಯ ಮತ್ತು ನಿಸ್ಸಂಗತ್ವದ ಪಾಠವನ್ನು ಆಕಾಶದಿಂದಲೂ, ಸ್ವಚ್ಛ, ಮಧುರ, ಸ್ನೇಹಸ್ವಭಾವವನ್ನು ನೀರಿನಿಂದಲೂ, ಅಗ್ನಿಯಿಂದ ತೇಜಸ್ಸು ಮತ್ತು ಅಪರಿಗ್ರಹ ಗುಣವನ್ನೂ ಅವಧೂತನು ಕಲಿತನು. ಹೀಗೆ ಪ್ರಕೃತಿಯಿಂದ ಅವಧೂತನು ಕಲಿತ ಅನೇಕ ಪಾಠಗಳ ವಿವರವನ್ನು ಭಗವಂತನು ಉದ್ಧವನಿಗೆ ಹೇಳುತ್ತಾನೆ. ಈ ಕಥೆಯ ಮೂಲಕ ಭಗವಂತನು ಸಾಧಕನಿಗೆ ಇರಬೇಕಾದ ಗುಣಗಳ ಪರಿಚಯವನ್ನು ಮಾಡಿಕೊಡುತ್ತಾನೆ. ಸಮಚಿತ್ತದಿಂದ ಕೂಡಿದವನೂ, ಅನಂತವಾದ ಕಡಲಿನಂತೆ ಮನಸ್ಸುಳ್ಳವನೂ, ಪ್ರಸನ್ನನೂ, ಇಂದ್ರಿಯಸುಖವನ್ನು ಬಯಸದವನೂ, ದುಂಬಿಯಂತೆ ಶಾಸ್ತ್ರಗಳಿಂದ ಸಾರಭಾಗವನ್ನು ಸಂಗ್ರಹಿಸುವವನೂ, ವಿರಾಗಿಯೂ ಆಗಿರಬೇಕು ಮುಂತಾದ ಅಮೂಲ್ಯವಾದ ಪಾಠವನ್ನು ತಿಳಿಸುತ್ತಾನೆ.

ಪಿಂಗಳೆ ಎಂಬ ವೇಶ್ಯೆಯ ಕಥೆಯ ಮೂಲಕ ಆಶೆಯು ಹೇಗೆ ಪರಮದುಃಖಕ್ಕೆ ಕಾರಣವಾಗುತ್ತದೆ ಎಂಬುದನ್ನೂ ಅವಧೂತನು ಬೋಧಿಸುತ್ತಾನೆ. ಏಕಾಂತದಲ್ಲಿ ತಪಶ್ಚರಣೆ ಮಾಡಬೇಕಾದ ಮಹತ್ವದ ಬಗ್ಗೆಯೂ ಒಂದು ಕಥೆಯ ಮೂಲಕ ಅವನು ತಿಳಿಸಿಕೊಡುತ್ತಾನೆ. **ಮನ ಏಕತ್ರ ಸಂಯುಜ್ಯ ಜಿತಶ್ವಾಸೋ ಜಿತಾಸನಃ । ವೈರಾಗ್ಯಾಭ್ಯಾಸಯೋಗೇನ ಧ್ರಿಯಮಾಣಮತಂದ್ರಿತಃ ॥** – ಸಾಧಕನು ಆಲಸಿಯಾಗದೆ ಜಾಗರೂಕನಾಗಿದ್ದು ಆಸನವನ್ನು ಜಯಿಸಬೇಕು. ಯೋಗಾಸನದ ಮೂಲಕ ಆಸನಶುದ್ಧಿ ಮಾಡಿಕೊಂಡು, ಪ್ರಾಣಾಯಾಮದ ಮೂಲಕ ಪ್ರಾಣವಾಯುವನ್ನು ಜಯಿಸಬೇಕು. ವೈರಾಗ್ಯದಿಂದ,

ಸತತ ಅಭ್ಯಾಸದಿಂದ ಮನಸ್ಸನ್ನು ಒಂದೆಡೆಯಲ್ಲಿ ನೆಲೆಗೊಳಿಸಬೇಕು. ಚಂಚಲವಾದ ಈ ಮನಸ್ಸು ಭಗವಂತನ ದಿವ್ಯಪಾದಾರವಿಂದಗಳಲ್ಲಿ ಸ್ಥಾನವನ್ನು ಪಡೆದು, ಮೆಲ್ಲಮೆಲ್ಲನೆ ಕರ್ಮವಾಸನೆಗಳಿಂದ ಯಾವಾಗ ದೂರವಾಗುವುದೋ, ಹೆಚ್ಚಿದ ಸತ್ವಗುಣದಿಂದ ರಜಸ್ಸು, ತಮೋಗುಣಗಳನ್ನು ದೂರತಳ್ಳುವುದೋ, ಆಗ ಕಟ್ಟಿಗೆಯ ಆಶ್ರಯವಿಲ್ಲದ ಅಗ್ನಿಯು ಶಾಂತವಾಗುವಂತೆ ಮನಸ್ಸು ಪರಮ ಶಾಂತಿಯನ್ನು ಹೊಂದುತ್ತದೆ. ಏಕಾಗ್ರತೆಯಿಂದ ಪರಮಾತ್ಮನಲ್ಲಿಯೇ ಲೀನವಾದ ಮನಸ್ಸು ಆನಂದಸಾಗರದಲ್ಲಿ ಮುಳುಗಿರುತ್ತದೆ. ಅವಧೂತನು ಈ ದೇಹವೂ ಸಹ ನಮಗೆ ಗುರುವಾಗಬಲ್ಲದೆಂಬುದನ್ನು ಸ್ವಾರಸ್ಯವಾಗಿ ವಿವರಿಸುತ್ತಾನೆ. ಬದುಕಲು, ಸಾಯಲು ಈ ದೇಹದ ಅನಿವಾರ್ಯತೆ ಇದ್ದದ್ದೇ. ಬದುಕಿರುವಾಗ ತತ್ತ್ವಗಳನ್ನು ವಿಮರ್ಶಿಸುವುದರ ಮೂಲಕ ವಿವೇಕದ ಶಿಕ್ಷಣವನ್ನೂ, ಅಂತಿಮವಾಗಿ ದುಃಖಕ್ಕೆ ಕಾರಣವಾಗುವುದರಿಂದ ವೈರಾಗ್ಯವನ್ನೂ ಈ ದೇಹ ಬೋಧಿಸುತ್ತದೆ. ಹೀಗೆ ಜ್ಞಾನೋಪದೇಶ ಮಾಡಿದ ಆ ಯೋಗಿ ಅವಧೂತನ ಮಾತುಗಳನ್ನು ಕೇಳಿ ಯದುರಾಯನು ಸಮಸ್ತವನ್ನೂ ತ್ಯಜಿಸಿ, ಸಮಚಿತ್ತನಾಗಿ ಕೊನೆಯಲ್ಲಿ ಮುಕ್ತಿಯನ್ನು ಹೊಂದುತ್ತಾನೆ.

### ಗಹನವಿಚಾರಗಳು

ಉದ್ಧವನಿಗೆ ಶ್ರೀಕೃಷ್ಣನು ಮಾಡಿದ ಉಪದೇಶ ಇನ್ನೂ ಇದೆ. ಭಕ್ತಿ–ಕರ್ಮ, ಜ್ಞಾನಯೋಗ ಸಾಧನೆಗಳು, ಜೀವಾತ್ಮ, ಪರಮಾತ್ಮರ ವಿಚಾರ, ಧ್ಯಾನಯೋಗ, ವರ್ಣಾಶ್ರಮ ನಿಯಮಗಳು, ತತ್ತ್ವಗಳ ವಿಚಾರ, ಪುರುಷಾರ್ಥಗಳು, ಅಣಿಮಾದಿ ಸಿದ್ಧಿ ವಿಚಾರ, ಭಗವದ್ವಿಭೂತಿಗಳು, ವರ್ಣ ಮತ್ತು ಆಶ್ರಮಗಳ ನಿಯಮಗಳು, ಭಗವದ್ಭಕ್ತಿಯ ಮೇಲ್ಮೆ, ಸೃಷ್ಟಿ ಲಯಾದಿಗಳ ಕ್ರಮ, ಭಗವದಾರಾಧನಾಕ್ರಮ – ಹೀಗೆ ಅನೇಕ ಗಹನ ವಿಚಾರಗಳನ್ನು ಶ್ರೀಕೃಷ್ಣನು ಉದ್ಧವನಿಗೆ ಉಪದೇಶಿಸುತ್ತಾನೆ. ಈ ಕಿರುಲೇಖನದಲ್ಲಿ ಇದರೊಳಗಿನ ಗಹನ ವಿಚಾರಗಳನ್ನು ಬಹಳ ಸ್ಥೂಲವಾಗಿ ಮಾತ್ರ ವಿವರಿಸಲು ಸಾಧ್ಯ.

ಶ್ರೀಕೃಷ್ಣನು ಉದ್ಧವನಿಗೆ ಸಾರಹೀನವಾದ ಲೌಕಿಕ ಮತ್ತು ಪಾರಲೌಕಿಕವಾದ ಉಪಭೋಗಗಳ ವಿವರಣೆಯನ್ನು ಹೀಗೆ ಕೊಡುತ್ತಾನೆ: ಸದ್ಗತಿಯನ್ನು ಅಪೇಕ್ಷಿಸುವ ಸಾಧಕನು ಭಗವಂತನಿಂದ ಉಪದಿಷ್ಟವಾದ ಧರ್ಮಗಳನ್ನೂ, ಕುಲಾಚಾರಗಳನ್ನೂ ಆಚರಿಸುತ್ತಿರಬೇಕು. ಫಲಾಪೇಕ್ಷೆ ಇಲ್ಲದೆ ಭಗವದ್ಗೀತೆ ಮುಂತಾದ ಧಾರ್ಮಿಕ ಗ್ರಂಥಗಳಲ್ಲಿ ಹೇಳಿರುವಂತೆ ನಡೆದುಕೊಳ್ಳಬೇಕು. ವಿಷಯಸುಖಾಭಿಲಾಷಿಗಳು ದುಃಖಕ್ಕೆ ಭಾಗಿಗಳಾಗುವರೇ ಹೊರತು ಸುಖವನ್ನು ಹೊಂದುವುದಿಲ್ಲ. ಇಂದ್ರಿಯಗಳಿಗೆ, ಭಾವನೆಗಳಿಗೆ ಅತೀತವಾಗಿ ಉಳಿಯುವುದು ಬ್ರಹ್ಮವಸ್ತು ಒಂದೇ. ಆದ್ದರಿಂದ ಅದು ಮಾತ್ರ ಸತ್ಯ. ಅಹಿಂಸೆ (ಯಮ), ಶೌಚ (ನಿಯಮ) ಮೊದಲಾದ ನಿಯಮಗಳನ್ನು ಯಥಾಶಕ್ತಿಯಾಗಿ ಆಚರಿಸಬೇಕು. ಪರಬ್ರಹ್ಮನಾದ ಭಗವಂತನ ಸ್ವರೂಪವನ್ನು ನಿಸ್ಸಂಶಯವಾಗಿ ತಿಳಿದಿರುವ ಗುರುವನ್ನು ಆಶ್ರಯಿಸಿ ಸೇವಿಸಬೇಕು. ಶಿಷ್ಯನಾದವನಿಗೆ ಅನುಮಾನ, ಹೊಟ್ಟೆಕಿಚ್ಚು, ಮಮಕಾರ, ಅವಸರ ಇರಬಾರದು. ಗುರುವಿನಲ್ಲಿ ದೃಢವಾದ ಪ್ರೀತಿ, ಶಾಸ್ತ್ರಾರ್ಥಗಳನ್ನು ಅರಿಯುವ ಅಪೇಕ್ಷೆ, ತಾಳ್ಮೆ ಇರಬೇಕು. ಇವುಗಳನ್ನು ಅನುಸರಿಸುವುದರಿಂದ ಕ್ರಮೇಣ ಯುಕ್ತಾಯುಕ್ತ ಪರಿಜ್ಞಾನ ಉಂಟಾಗಿ ಸಂಸಾರವು ಅನಿತ್ಯವೆಂಬ ದೃಢಭಾವ ಮೊಳೆತು, ಮೋಹವು ನಾಶವಾಗುತ್ತದೆ. ಹೀಗೆ ಮನಶ್ಶುದ್ಧಿ ಉಂಟಾಗಿ, ಜೀವಾತ್ಮ ಪರಮಾತ್ಮರ ಸ್ವರೂಪವನ್ನು ಅರಿಯಲು ಸಾಧ್ಯವಾಗುವುದು.

ಯಾವ ರೀತಿಯಾಗಿ ದಹಿಸಲ್ಪಡುವ ಕಟ್ಟಿಗೆಗಿಂತ ಅದನ್ನು ದಹಿಸುವ ಅಗ್ನಿಯು ಬೇರೆಯೇ ಆಗಿದೆಯೋ, ಅಂತೆಯೇ ಆತ್ಮವು ಈ ಸ್ಥೂಲದೇಹದಲ್ಲಿದ್ದರೂ ಸ್ವರೂಪದಲ್ಲಿ ಭಿನ್ನವಾಗಿರುವುದು. ಅದು ದೇಹದಲ್ಲಿರುವಾಗ, ದೇಹದ ಗುಣಗಳಾದ ಹುಟ್ಟು, ಸಾವು, ಕೃಶತೆ, ಸ್ಥೂಲತೆ ಮುಂತಾದ ವ್ಯವಹಾರಗಳಲ್ಲಿ ಸೇರಿರುವಂತೆ ಕಾಣುತ್ತದೆ. ವಾಸ್ತವದಲ್ಲಿ ಈ ಗುಣಭೇದಗಳ್ಯಾವುವೂ ಸ್ವಯಂಪ್ರಕಾಶವಾದ ಆತ್ಮಕ್ಕೆ ಸಂಬಂಧಿಸಿದ್ದಲ್ಲ. ಶರೀರವು ಅನಿತ್ಯವೂ ಅನೇಕವೂ ಜಡವೂ ಆಗಿದೆ. ಆತ್ಮವು ನಿತ್ಯವೂ ಅದ್ವಿತೀಯವೂ ಚೇತನವೂ ಆಗಿದೆ. ಹೀಗಾಗಿ ದೇಹ, ಆತ್ಮಗಳೆರಡೂ ಭಿನ್ನವಾಗಿವೆ. ಆದರೂ ಈ ದೇಹಸಂಬಂಧವಿರುವಾಗ ಸಂಸಾರಬಂಧನವುಂಟಾಗುತ್ತದೆ. ಅದರ ಬಿಡುಗಡೆಗೆ ಪರಮಾತ್ಮನ ಉಪಾಸನೆಯಲ್ಲದೆ ಬೇರೆ ಮಾರ್ಗವೇ ಇಲ್ಲ. ಈ ಜನ್ಮ–ಮೃತ್ಯುರೂಪವಾದ ಸಂಸಾರಕ್ಕೆ ಅಜ್ಞಾನವೇ ಮೂಲಕಾರಣ. ಆದುದರಿಂದ ಆತ್ಮಜ್ಞಾನವನ್ನು ಪಡೆಯಲು ಪ್ರಯತ್ನಿಸಬೇಕು. ವಿವೇಕಿಯು ಆಚಾರ್ಯೋಪಾಸನೆಯಿಂದ ದೇಹಸ್ಥನಾಗಿರುವ ಜೀವಾತ್ಮನಾದ ತನ್ನ ಮತ್ತು ತನ್ನ ಅಂತರಾತ್ಮನಾದ ಪರಮಪುರುಷನ ನಿಶ್ಚಯರೂಪವನ್ನು ತಿಳಿದು, ದೇಹಾನುಬಂಧಿಗಳಾದ ಹೆಂಡತಿ, ಮಕ್ಕಳು, ಮನೆಮಠಗಳ ಮಮಕಾರವನ್ನು ಕ್ರಮವಾಗಿ ತಗ್ಗಿಸುತ್ತಾ ಬರಬೇಕು. ಕೆಳಗೊಂದು ಮೇಲೊಂದು ಚಕಮುಕಿ ಕಲ್ಲುಗಳನ್ನಿಟ್ಟು ಹೊಡೆಯುವುದರಿಂದ ಮಧ್ಯದಲ್ಲಿದ್ದ ಹುಲ್ಲುಕಡ್ಡಿಗೆ ಅಗ್ನಿಸ್ಪರ್ಶವಾಗುವಂತೆ, ಗುರು–ಶಿಷ್ಯರ ನಡುವೆ ನಡೆಯುವ ವೇದಾಂತಾರ್ಥ ವಿಚಾರದಿಂದಲೇ ಜ್ಞಾನೋತ್ಪತ್ತಿಯಾಗಿ ಮಾಯಾಸಂಬಂಧವಾದ ಅಜ್ಞಾನವು ದಹಿಸಲ್ಪಟ್ಟು ಮುಕ್ತಿಗೆ ಸಾಧನವಾದ ಜ್ಞಾನವು ದೊರೆಯುತ್ತದೆ.

ಉದ್ಧವನು ಬದ್ಧರು, ಮುಕ್ತರು ಮತ್ತು ಭಕ್ತರ ಲಕ್ಷಣಗಳನ್ನು ತಿಳಿಸಬೇಕೆಂದು ಕೋರುತ್ತಾನೆ. ಅದಕ್ಕೆ ಉತ್ತರಿಸುತ್ತಾ ಶ್ರೀಕೃಷ್ಣನು ಹೀಗೆ ಹೇಳುತ್ತಾನೆ: ಜೀವನೂ ಈಶ್ವರನೂ ಒಂದೇ ಗೂಡಿನಲ್ಲಿರುವ ಎರಡು ಪಕ್ಷಿಗಳಂತೆ ದೇಹವೆಂಬ ಗೂಡಿನಲ್ಲಿ ಒಟ್ಟಾಗಿಯೇ ಇರುವರು. ಇವರಿಬ್ಬರೂ ನಿತ್ಯರೇ ಆಗಿದ್ದರೂ ಅವರಲ್ಲಿ ಪರಸ್ಪರ ವಿರುದ್ಧ ಧರ್ಮಗಳಿವೆ. ಜೀವವೆಂಬ ಪಕ್ಷಿಯು ಕರ್ಮಫಲವನ್ನು ತಿನ್ನುತ್ತದೆ. ಈಶ್ವರನೆಂಬ ಪಕ್ಷಿಯು ಜ್ಞಾನಾದಿಗಳಿಂದ ಬಲಿಷ್ಠವಾಗಿದೆ.